ಶಿವಮೊಗ್ಗ ವಿಧಾನಸಭಾ ಕ್ಷೇತ್ರದ ಕೆರೆಗಳಲ್ಲಿ ಹೂಳೆತ್ತುವುದು:

9 (396) ಶ್ರೀ ಚಂದ್ರಶೇಖರಪ್ಪ ಹೆಚ್.ಎಂ. (ಶಿವಮೊಗ್ಗ): ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ಶಿವಮೊಗ್ಗ ವಿಧಾನಸಭಾ ಕ್ಷೇತ್ರಗಳಲ್ಲಿರುವ ಕೆರೆ ಹೂಳು ತೆಗೆಸಲಾಗಿದೆಯೆ; (ವಿವರ ನೀಡುವುದು;

2) ಶಿವಮೊಗ್ಗ ತಾಲ್ಲೂಕು ಮೋಟಳ್ಳ ಹಾಗೂ ಜಾರ್ಗಲ್ ಹಳ್ಳಗಳ ಕಾಮಗಾರಿಗಳನ್ನು ಯಾವಾಗ ಕೈಗೆತ್ತಿಕೊಳ್ಳಲಾಗುವುದು?

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು)

1) 64 ಕೆರೆಗಳಿದ್ದು, ಶಿವಮೊಗ್ಗ ತಾಲ್ಲೂಕಿನ ಲಕ್ಕವಳ್ಳಿ ಕೆರೆಯ ಹೂಳನ್ನು ತೆಗೆಯುವ ಕಾರ್ಯವನ್ನು 1999-2000ನೇ ಸಾಲಿನಲ್ಲಿ ಕೈಗೆತ್ತಿಕೊಳ್ಳಲಾಗಿದೆ. ಪ್ರಸ್ತುತ ಸಾಲಿನಲ್ಲಿ ಬಹುತೇಕ ಕೆರೆಗಳಲ್ಲಿ ನೀರು ತುಂಬಿರುವ ಕಾರಣ ಕೆರೆಗಳಲ್ಲಿ ಹೂಳೆತ್ತುವ ಕಾರ್ಯವನ್ನು ಸ್ಥಗಿತಗೊಳಿಸಲಾಗಿರುತ್ತದೆ.

2) ಶಿವಮೊಗ್ಗ ತಾಲ್ಲೂಕು ಉಂಬ್ಳೆಬೈಲು ಹತ್ತಿರ ಜಾರ್ಗಲ್ ಹಳ್ಳಕ್ಕೆ ಪಿಕಪ್ ನಿರ್ಮಾಣ ಕಾಮಗಾರಿಯು ಪ್ರಸಕ್ತ (2000-01) ಸಾಲಿನ ಆಯವ್ಯಯದಲ್ಲಿ ರೂ. 30.00 ಲಕ್ಷಗಳ ಅಂದಾಜು ಮೊತ್ತ ಹಾಗೂ ರೂ. 9.00 ಲಕ್ಷಗಳ ಅನುದಾನದೊಂದಿಗೆ ಸೇರಿದ್ದು ಅಂದಾಜಿಗೆ ತಾಂತ್ರಿಕ ಮಂಜೂರಾತಿಯನ್ನು ನೀಡಲಾಗಿದೆ. ಮುಂದೆ ಇಲಾಖೆಯ ನಿಯಮಾವಳಿ ಪ್ರಕಾರ ಟೆಂಡರ್ ಕರೆದು ಕಾಮಗಾರಿಯನ್ನು ತೆಗೆದುಕೊಳ್ಳಲಾಗುವುದು.

ಶಿವಮೊಗ್ಗ ತಾಲ್ಲೂಕು ಮೋಟಳ್ಳ ಹಳ್ಳಕ್ಕೆ ಪಿಕಪ್ ನಿರ್ಮಾಣ ಕಾಮಗಾರಿಯು ಜಿಲ್ಲಾ ಪಂಚಾಯತ್ ಇಲಾಖೆಯ ವ್ಯಾಪ್ತಿಗೆ ಒಳಪಟ್ಟಿರುತ್ತದೆ.

ಶ್ರೀ ಹೆಚ್. ಎಂ. ಚಂದ್ರಶೇಖರಪ್ಪ: ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾರ್ಚ್ ತಿಂಗಳು ಮುಗಿಯುತ್ತಾ ಬಂತು. ಏಪ್ರಿಲ್ ಮೇ ತಿಂಗಳೊಳಗಾಗಿ ಕೆರೆಗಳ ಹೂಳನ್ನು ತೆಗೆಯದಿದ್ದರೆ ನೀರು ಕೆರೆಯ ಪೂರ್ತಿ ಇರುವುದಿಲ್ಲ. ಮತ್ತು ಇದರಿಂದ ದನಕರುಗಳಿಗೆ ಕೂಡ ಬಹಳ ತೊಂದರೆಯಾಗುತ್ತದೆ. ಭದ್ರಾ ಅಚ್ಚುಕಟ್ಟು ಪ್ರದೇಶದ ನೀರು ಕೂಡ ನನ್ನ ಕ್ಷೇತ್ರದಲ್ಲಿ ಇರುವ ಕೆರೆಗಳ ಸುಮಾರು ಅರ್ಧ ಭಾಗದಷ್ಟಕ್ಕೆ ಬರುತ್ತಿದೆ. ಆ ಭಾಗದಲ್ಲಿ ಕೂಡ ಒತ್ತುವರಿ ಆಗಿರುವುದರಿಂದ ಆ ಭಾಗದಿಂದ ಹೂಳನ್ನು ತೆಗೆಯುತ್ತಾ ಬಂದರೆ ಬಾಕಿ ಬೇರೆ ಭಾಗದಲ್ಲಿ ಕೆಲಸ ಮಾಡಲಿಕ್ಕೆ ಅನುಕೂಲವಾಗುತ್ತದೆ. ಕೆರೆ ಹೂಳನ್ನು ತೆಗೆಯುವುದಕ್ಕೆ ಯಾವ ಸರ್ಕಾರ ಕೂಡ ಹೆಚ್ಚಿನ ಆದ್ಯತೆ ಕೊಟ್ಟಿಲ್ಲ. ಆದರೆ ನಮ್ಮ ಮಾನ್ಯ ಮುಖ್ಯಮಂತ್ರಿಗಳಾದಂಥ ಶ್ರೀ ಎಸ್.ಎಂ. ಕೃಷ್ಣ ಅವರು ಕೆರೆಗಳ ಹೂಳನ್ನು ಎತ್ತುವುದಕ್ಕೆ ಒಳ್ಳೆಯ ಯೋಜನೆಗಳನ್ನು ಹಾಕಿಕೊಂಡಿದ್ದಾರೆ. ಮಾನ್ಯ ಸಣ್ಣ ನೀರಾವರಿ ಸಚಿವರಾದಂಥ ಶ್ರೀ ಕುಮಾರ್ ಬಂಗಾರಪ್ಪ ಅವರು ಇದರ ಬಗ್ಗೆ ಹೆಚ್ಚು ಕಾಳಜಿವಹಿಸಿ ಆದಷ್ಟು ಬೇಗ ಎಲ್ಲಾ ಹೂಳನ್ನು ತೆಗೆಸಿ ದನಕರುಗಳಿಗೆ ನೀರು ಕುಡಿಯುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಎಸ್. ಕುಮಾರ್ ಬಂಗಾರಪ್ಪ: ಮಾನ್ಯ ಅಧ್ಯಕ್ಷರೆ, ಈ ನಿಟ್ಟಿನಲ್ಲಿ ಜಲಸಂವರ್ಧನಾ ಯೋಜನೆಯಡಿಯಲ್ಲಿ ಈಗಾಗಲೇ ಕಾರ್ಯಕ್ರಮ ಹಮ್ಮಿಕೊಂಡಿದ್ದು ಹಣಕಾಸಿನ ವ್ಯವಸ್ಥೆಗೋಸ್ಕರ ಸ್ವಲ್ಪ ವಿಳಂಬವಾಗಿದೆ. ಆದು ಕಮ್ಯುನಿಕೇಟ್ ಆದ ತಕ್ಷಣ ನಾವು ಆದಷ್ಟು ಬೇಗ ಕೆಲಸಕಾರ್ಯಗಳನ್ನು ಪ್ರಾರಂಭ ಮಾಡುತ್ತೇವೆ.

ಶ್ರೀ ಹೆಚ್.ಎಂ. ಚಂದ್ರಶೇಖರಪ್ಪ: ಮಾನ್ಯ ಅಧ್ಯಕ್ಷರೆ, ಶಿವಮೊಗ್ಗ ತಾಲ್ಲೂಕು ಮೊಟಳ್ಳ ಮತ್ತು ಜಾರ್ಗಲ್ ಹಳ್ಳದ ಬಗ್ಗೆ 30 ಲಕ್ಷ ರೂಪಾಯಿಗಳ ಅಂದಾಜು ಮೊತ್ತವನ್ನು ಆಯವ್ಯಯದಲ್ಲಿ ಇಟ್ಟಿದ್ದು ಅದರಲ್ಲಿ 9 ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದೆ. ಈ ಕೆಲಸವನ್ನು ತೀವ್ರಗತಿಯಲ್ಲಿ ಮಾಡಬೇಕು. ಈ ಭಾಗ ಬಹಳ ವರ್ಷಗಳಿಂದ ನೆನೆಗುದಿಗೆ ಬಿದ್ದಿದೆ. ಮತ್ತು ಅಲ್ಲಿಯ ಜನರಿಗೆ ಕುಡಿಯುವುದಕ್ಕೆ ಕೂಡ ನೀರಿನ ತೊಂದರೆ ಇದೆ. ಆದ್ದರಿಂದ ಮೊಟಳ್ಳ ಮತ್ತು ಜಾರ್ಗಲ್ ಹಳ್ಳದ ಕೆಲಸವನ್ನು ಜಾಗ್ರತೆಯಾಗಿ ಆದಷ್ಟು ಬೇಗ ಕೈಗೊಂಡರೆ ಸುಮಾರು 500 ರಿಂದ 600 ಎಕರೆ ಪ್ರದೇಶಕ್ಕೆ ನೀರಾವರಿಯ ಅನುಕೂಲವಾಗುತ್ತದೆ.

ಶ್ರೀ ಎಸ್. ಕುಮಾರ್ ಬಂಗಾರಪ್ಪ: ಮಾನ್ಯ ಅಧ್ಯಕ್ಷರೆ, ಆ ಬಗ್ಗೆ ಈಗಾಗಲೇ ಟೆಂಡರ್ ಕರೆದಿದ್ದು ಆದು ಫೆಬ್ರವರಿ 28 ರಂದು ಓಪನ್ ಆಗಬೇಕಾಗಿತ್ತು. ಆದರೆ ತಾಂತ್ರಿಕ ಕಾರಣಗಳಿಂದ ಏಪ್ರಿಲ್ ತಿಂಗಳವರೆಗೆ ಮುಂದೂಡಲಾಗಿದೆ. ಟೆಂಡರ್ ಓಪನ್ ಆದ ತಕ್ಷಣ ಕೆಲಸ ಕಾರ್ಯಗಳನ್ನು ಪ್ರಾರಂಭ ಮಾಡುತ್ತೇವೆ.

ಬೈಂದೂರ್‌ನಲ್ಲಿ ವಿದ್ಯುಚ್ಛಕ್ತಿ ಮಂಡಳಿಯ ವಿಭಾಗೀಯ ಕಛೇರಿ ತೆರೆಯುವುದು:

11 (389) ಶ್ರೀ ಕೆ. ಗೋಪಾಲ ಪೂಜಾರಿ (ಬೈಂದೂರು): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ಬೈಂದೂರು, ವಿಧಾನಸಭಾ ಕ್ಷೇತ್ರ ಉಡುಪಿಯಿಂದ 80 ಕಿ.ಮೀ. ದೂರದಲ್ಲಿದೆ ಈ ಬೈಂದೂರು ಕುಂದಾಪುರ ತಾಲ್ಲೂಕಿಗೆ ಒಳಪಟ್ಟಿರುತ್ತದೆ. ಕುಂದಾಪುರವು ತಾಲ್ಲೂಕು ಆಗಿದ್ದು, ಕೆ.ಇ.ಬಿ. ಉಪ ವಿಭಾಗವನ್ನು ಮಾತ್ರ ಹೊಂದಿರುತ್ತದೆ. ಈ ಕೆ.ಇ.ಬಿ. ಉಪ ವಿಭಾಗವನ್ನು ವಿಭಾಗೀಯ ಕಛೇರಿಯನ್ನಾಗಿ ಮಾರ್ಪಡಿಸಿ ಮಂಜೂರು ಮಾಡಬಹುದೇ;

2) ಸಾಧ್ಯವಿಲ್ಲದಿದ್ದಲ್ಲಿ ವಿವರ ನೀಡುವುದು?

ಶ್ರೀ ವೀರಕುಮಾರ್ ಅ. ಪಾಟೀಲ್ (ಇಂಧನ ರಾಜ್ಯ ಸಚಿವರು)

1) ನಿಗಮವು ಸೆಪ್ಟೆಂಬರ್ 2000 ದಲ್ಲಿ ಒಂದು ಆದೇಶವನ್ನು ಹೊರಡಿಸಿ ಕುಂದಾಪುರ ಉಪ ವಿಭಾಗವನ್ನು ವಿಭಜಿಸಿ, ಕುಂದಾಪುರ ತಾಲ್ಲೂಕಿನ ಬೈಂದೂರಿನಲ್ಲಿ ಒಂದು ಹೊಸ ಉಪ ವಿಭಾಗವನ್ನು ತೆರೆದಿದೆ. ಕುಂದಾಪುರದಲ್ಲಿರುವ ಉಪ ವಿಭಾಗವನ್ನು ವಿಭಾಗೀಯ ಕಛೇರಿಯನ್ನಾಗಿ ಮಾರ್ಪಡಿಸುವ ಪ್ರಸ್ತಾವನೆಯು ಸದ್ಯಕ್ಕೆ ನಿಗಮದ ಮುಂದೆ ಇರುವುದಿಲ್ಲ.

2) ಪ್ರಸ್ತುತ ನಿಗಮದ ಉಡುಪಿ ವಿಭಾಗದ ವ್ಯಾಪ್ತಿಗೆ ಉಡುಪಿ ಜಿಲ್ಲೆಯ, ಉಡುಪಿ, ಕಾರ್ಕಳ ಮತ್ತು ಕುಂದಾಪುರ ತಾಲ್ಲೂಕುಗಳು ಒಳಪಟ್ಟಿದ್ದು ಈ ವಿಭಾಗೀಯ ಕಛೇರಿಯಿಂದಲೇ